**ಕವಿತೆ**



**ರಾಧೇಶ ತೋಳ್ಪಾಡಿ ಎಸ್.**



# ಕನ್ನಡನಾಡಿನ ಶ್ರೀಗಂಧ

ನಳನಳಿಸಿದೆ ಅಹ
ಫಳಫಳಿಸಿದೆ ಎಲೆ
ಎಳೆ ತಿಳಿ ಹಸಿರಿನ ಶ್ರೀಗಂಧ!
ಕಣಕಣದಲ್ಲೂ
ಅಣು ಅಣುವಲ್ಲೂ
ಮಣ್ಣಿನ ಪರಿಮಳ ಮೈ ತುಂಬ!

ಹಬ್ಬುವೆನೆನ್ನುವ
ತಬ್ಬುವೆನೆನ್ನುವ
ಕೊಬ್ಬಿನ ಉಬ್ಬಿನ ಮಾತಿಲ್ಲ
ನಾನೇ ಎತ್ತರ
ನನದೇ ಬಿತ್ತರ
ಎನ್ನುತ ಡಂಗುರ ಸಾರಲ್ಲ!

ಚಿಗುರಲಿ ನಗೆಯಿದೆ
ಮಗುವಿನ ಬಗೆಯಿದೆ
ನಗು ಮಗು ಅರಳು ಎನುವಂತೆ
ಹಗುರಾಗಿರುವುದೆ
ಹೊಸ ಕನಸಲ್ಲವೆ
ಕೇಳಿದೆ ಕೃಷ್ಣನ ಕೊಳಲಂತೆ!

ಮುಟ್ಟಿಯು ಮಣ್ಣನು
ಮುಟ್ಟದ ಹಾಗಿದೆ
ಎಲೆ ಎಲೆ ರೆಕ್ಕೆಯ ಬಡಿಯುತ್ತ!
ಇನ್ನೇನೀಗಲೆ
ಹಾರುವ ಹಾಗಿದೆ
ನೆಚ್ಚಿನ ನೀಲಿಯ ಬಾನತ್ತ!

ಮಣ್ಣಿನ ಪುಣ್ಯವೆ
ಮೂರ್ತಿಯ ತಾಳಿತೆ
ಗಂಧವ್ರತದವರೊಡಮೂಡಿ!
ಬಾನಿನ ಪರಿಮಳ
ಕನ್ನಡದೊಳಗೇ
ಬೆರೆತುಹೋಯಿತಹ ಒಂದಾಗಿ!